# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ ೩೩, ಮನೋರಾನಪಾಳ್ಯ, ಬೆಂಗಳೂರು.

ಸಂಖ್ಯೆ: ಸ.ಅ/ವಾ-33/ಪಿ.ಆರ್/15/2021-22 ದಿನಾಂಕ: 07/8/2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ **ದಿನಾಂಕ:-07-08-2021** ರಂದು ಬೆಳಿಗ್ಗೆ 11:30 ಘಂಟೆಗೆ ವಾರ್ಡ್ ನಂ:33 ಮನೋರಾಯನಪಾಳ್ಯ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1. | ಅಶೋಕ್ ಹಿಂಡಾ, ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ ವಿಭಾಗ) | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2. | ಶ್ರೀ ಕನಕರಾಜ್, ಸಹಾಯಕ ಅಭೀಯಂತರರು | ಸದಸ್ಯ ಕಾರ್ಯದರ್ಶಿ ವಾರ್ಡ್ ನಂ: 33 ಮನೋರಾಯನಪಾಳ್ಯ | ಹಾಜರಿದ್ದರು |
| 3. | ಶ್ರೀ ಮೊಹಮದ್ ಮುದಾಸೀರ್ ಸಹಾಯಕ ಅಭೀಯಂತರರು | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 4. | ಶ್ರೀ ಆನಂದ್ ಕಿರಿಯ ಅಭಿಯಂತರರು | ವಿದ್ಯುತ್ ವಿಭಾಗ, ಬಿಬಿಎಂಪಿ | ಹಾಜರಿದ್ದರು |
| 5. | ಶ್ರೀ ರಾಜಣ್ಣ | ಸಹಾಯಕ ಕಂದಾಯ ಅಧಿಕಾರಿ | ಹಾಜರಿದ್ದರು |
| 6. | ಶ್ರೀ ಆರ್.ಎಸ್ ಮಂಜೂನಾಥ | ಕಂದಾಯ ಪರಿವೀಕ್ಷಕರು | ಹಾಜರಿದ್ದರು |
| 7. | ಶ್ರೀ ನಂಜಪ್ಪ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 8. | ಶ್ರೀಮತಿ ಸಾಯಿದಾ ನಜಿಮುನ್ನಿಸಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 9. | ಶ್ರೀಜೆ. ನಾಗೇಂದ್ರ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 33 ಮನೋರಾಯನಪಾಳ್ಯ | ಹಾಜರಿದ್ದರು |
| 10. | ಶ್ರೀ ವೆಂಕಟರಮಣ | ಮಾರ್ಷಲ್ ವಾರ್ಡ್ ಸಂಖ್ಯೆ 33 | ಹಾಜರಿದ್ದರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಅಶೋಕ್ ಹಿಂಡಾ, ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ ವಿಭಾಗ) ಮತ್ತು ಕಾರ್ಯದರ್ಶಿಗಳಾದ ಶ್ರೀ ಮಾಧವ ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ: 33 ರವರು ಹಿಂದಿನ ಸಭೆಯಲ್ಲಿ ನಡೆದಂತಹ ವಿಷಯಗಳ ಹಾಗೂ ದೂರುಗಳ ಕುರಿತು ತೆಗೆಕೊಂಡಿರುವ ಕ್ರಮಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು

- ವಾರ್ಡ್ ಸಂಖ್ಯೆ : 33 ಮನೋರಾಯನ ಪಾಳ್ಯ ವ್ಯಾಪ್ತಿಯಲ್ಲಿ ಷಿಟ್ತಿಛಿಥಿಚಿ-2 ನಲ್ಲಿ ಬರುವ ದೂರುಗಳನ್ನು ದಿನನಿತ್ಯದಂತೆ ವೀಕ್ಷಿಸಿ ಕೂಡಲೇ ದೂರುಗಳಿಗೆ ಸ್ಪಂದಿಸಲು ಕ್ರಮ ವಹಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.
- ವಾರ್ಡ್ ಸಂಖ್ಯೆ 33 ರ ಮನೋರಾಯನ ಪಾಳ್ಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಜನಸಂದನಿ ಇರುವುದರಿಂದ ವ್ಯಾಪ್ತಿಯಲ್ಲಿ ಕೋವಿಡ್-19 ಟೆಸ್ಟ್‌ಗಳನ್ನು ಮಾಡಲು ಮತ್ತು ಮುಂಜಾಗೃತ ಕ್ರಮದ ಬಗ್ಗೆ ಚರ್ಚಿಸಲಾಯಿತು
- ವಾರ್ಡ್ ಸಂಖ್ಯೆ 33 ಮನೋಈರಾಯನ ಪಾಳ್ಯ ವ್ಯಾಪ್ತಿಯಲ್ಲಿ ಬಡಾವಣೆಯಲ್ಲಿ ಬ್ಲಾಕ್‌ಸ್ಪಾಟ್ ತೆರವುಗೊಳಿಸಲು, ಸಿ.ಸಿ ಕ್ಯಾಮೆರ ಅಳವಡಿಸಲು, ಮರದ ಕೊಂಬೆಗಳನ್ನು ಕತ್ತರಿಸಲು (ಟ್ರ ಟ್ರಿಮ್ಮಿಂಗ್), ಬೀದಿದೀಪ ನಿರ್ವಹಣೆ ಸಮರ್ಪಕವಾಗಿ ಮಾಡಲು ಕೋರಿದರು.

- ವಾರ್ಡ್ ಸಂಖ್ಯೆ : 33 ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಬಗ್ಗೆ ಸೂಕ್ತ ಪರಿವೀಕ್ಷಣೆ ನಡೆಸಿ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಸಂಬಂಧಪಟ್ಟ ಅಭಿಯಂತರರು ಗಳಿಗೆ ಸೂಚಿಸಿದರು.
- ವಾರ್ಡ್ ಸಂಖ್ಯೆ 33 ರ ಮನೋರಾಯನ ಪಾಳ್ಯ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಕಸ ಎಸೆಯುವುದು ಕಂಡುಬಂದಿರುತ್ತದೆ ಸದರಿ ಸ್ಥಳಗಲ್ಲಿ ಬ್ಲಾಕ್ ಸ್ಪಾಟ್‌ಗಳು ಉತ್ಪತಿಯಾಗುತ್ತಿವೆ ಅದ್ದರಿಂದ ಕ್ರಮ ವಹಿಸಲು ಸೂಚಿಸಲಾಯಿತು.
- ವಾರ್ಡ್ ಸಂಖ್ಯೆ : 33 ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿರುವ ಬೀದಿ ದಿಪಗಳನ್ನು ಪ್ರತಿ ದಿನ ರಾತ್ರಿ ಪಾಳಿಯಲ್ಲಿ ಪರಿವೀಕ್ಷಣೆ ಮಾಡಿ ಆಗಿಂದಾಗೆ ಸರಿಪಡಿಸಲು ಹಾಗೂ ಬೀದಿ ದಿಪಗಳನ್ನು ಅಳವಡಿಸಲು ಸಂಬಂಧಪಟ್ಟ ವಿಧ್ಯುತ್ ವಿಭಾಗದ ಅಭಿಯಂತರರಿಗೆ ಸೂಚಿಸಲಾಗಿದೆ.
- ವಾರ್ಡ್ ಸಂಖ್ಯೆ : 33 ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ ರವರು ಯಾವುದೇ ಕಾಮಗಾರಿಯನ್ನು ನಿರ್ವಹಿಸುವ ಮುನ್ನ ಸಂಬಂಧಪಟ್ಟ ಬಿಬಿಎಂಪಿ ಕಛೇರಿಗೆ ಮಾಹಿತಿ ನೀಡಲು ಹಾಗೂ ಅಭಿಯಂತರರೊಡನೆ ಚರ್ಚಿಸಿ ಕಾಮಗಾರಿಯನ್ನು ಮುಂದುವರೆಸುವುದು.
- ವಾರ್ಡ್ ಸಂಖ್ಯೆ : 33ರ ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿ ಕೋವಿಡ್–19 ಕೊರೊನಾ ವೈರಸ್ ತಡಗಟ್ಟುವ ಸಲುವಾಗಿ ಎಲ್ಲಾ ಸಾರ್ವಜನಿಕರುಗಳು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಕಡ್ಡಾಯವಾಗಿ ಮಾಸ್ಕ್ ಧರಿಸಲು ಸಾರ್ವಜನಿಕರಲ್ಲಿ ಮನವರಿಕೆ ಮಾಡಲು ಸೂಚಿಸಿದ್ದು, ತಪ್ಪಿದಲ್ಲಿ ಘನ ಸರ್ಕಾರದ ಆದೇಶದಂತೆ ದಂಡವನ್ನು ಹೆಚ್ಚಿನ ರೀತಿಯಲ್ಲಿ ವಿದಿಸಲು ಆರೋಗ್ಯ ಇಲಾಖೆಗೆ ಸೂಚಿಸಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 33 ಮನೋರಾಯನ ಪಾಳ್ಯ

–ಸಹಿ–
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 33 ಮನೋರಾಯನ ಪಾಳ್ಯ

ಪ್ರತಿಯನ್ನು:–

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಆಪ್ತ ಕಾರ್ಯಾಲಯಕ್ಕೆ ಕಳುಹಿಸುತ್ತಾ, ಆಡಳಿತಗಾರರ ಅವಗಾಹನೆಗೆ ತರಲು ಕೋರಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆಪ್ತ ಕಾರ್ಯಾಲಯಕ್ಕೆ ಕಳುಹಿಸುತ್ತಾ, ಆಯುಕ್ತರ ಅವಗಾಹನೆಗೆ ತರಲು ಕೋರಿದೆ.
3. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಪ್ರತಿ.